K GOPALAKRISHNA Digitally signed by K GOPALAKRISHNA Date: 2025.04.28 12:15:05 +0530



**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ., ಸೋಮವಾರಪೇಟೆ.**

**ಸಿ.ಸಿ.ನಂ.09/2025**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಸೋಮವಾರಪೇಟೆ ಅಬಕಾರಿ ನಿರೀಕ್ಷಕರು,

**ವಿರುದ್ದ**

ಆರೋಪಿ : ತೀರ್ಥಕುಮಾರ್ ತಂದೆಃ ಕುಂಟಪ್ಪ, 40 ವರ್ಷ,
ಹಿತ್ತಲಗದ್ದೆ ಗ್ರಾಮ, ಆಲೂರು ಸಿದ್ದಾಪುರ ಅಂಚೆ,
ಸೋಮವಾರಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

**ದೋಷಾರೋಪಣೆ**

**ನಾನು ಶ್ರೀ ಕೆ. ಗೋಪಾಲ ಕೃಷ್ಣ, ಬಿ.ಎ.ಎಲ್., ಎಲ್.ಎಲ್.ಬಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ., ಸೋಮವಾರಪೇಟೆ ಈ ಮೂಲಕ ಆರೋಪಿಯ ಮೇಲೆ ಮಾಡಿದ ದೋಷಾರೋಪಣೆ ಏನೆಂದರೆ.**

ದಿನಾಂಕ 01.08.2024 ರಂದು ಮಧ್ಯಾಹ್ನ 3.00 ಗಂಟೆಯ ಸಮಯದಲ್ಲಿ ಸೋಮವಾರಪೇಟೆ ಠಾಣಾ ಸರಹದ್ದಿಗೆ ಸೇರಿದ ಗೋಣಿಮರೂರು ಗ್ರಾಮ ವ್ಯಾಪ್ತಿ ಯಲ್ಲಿ ಗಸ್ತುಕಾರ್ಯ ನಡೆಸುತ್ತಿರುವಾಗ ಬಂದ ಮಾಹಿತಿ ಮೇರೆಗೆ ಹಿತ್ತಲಗದ್ದೆ ಗ್ರಾಮ ದಲ್ಲಿ ಆರೋಪಿಯಾದ ನಿನ್ನ ಮನೆಗೆ ದಾಳಿ ಮಾಡಿದಾಗ ಮನೆಯ ಅಡುಗೆ ಕೋಣೆಗೆ ಹೊಂದಿರುವ ಡೈನಿಂಗ್ ಹಾಲ್ ನಲ್ಲಿ ಒಂದು ಮರದಟೇಬಲ್ ಕೆಳಗೆ 15 ಲೀ ಸಾಮರ್ಥ್ಯದ 1 ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನ್ ನಲ್ಲಿ ಅಂದಾಜು 25 ಲೀ ನಷ್ಟು ಕಳ್ಳಬಟ್ಟಿ ಸಾರಾಯಿ ಹಾಗೂ 20 ಲೀ ಸಾಮರ್ಥ್ಯದ 1 ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನ್ ನಲ್ಲಿ ಅಂದಾಜು 20 ಲೀ ನಷ್ಟು ಒಟ್ಟು 45 ಲೀ ನಷ್ಟು ಕಳ್ಳಬಟ್ಟಿ ಸಾರಾಯಿ ಇರುವುದು ಕಂಡು ಬಂದಿರುತ್ತದೆ, ಹಾಗೂ ಅದರ ಪಕ್ಕದಲ್ಲಿ ತಳಭಾಗ ಕಪ್ಪಾಗಿರುವ 50 ಲೀ ಸಾಮರ್ಥ್ಯದ 1 ಅಲ್ಯೂಮಿನಿಯಂ ಹಂಡೆ, 10 ಲೀ ಸಾಮರ್ಥ್ಯದ 1 ಅಲ್ಯೂಮಿನಿಯಂ ಪಾತ್ರೆ, ತಳಭಾಗ ರಂದ್ರವಿರುವ 1 ಅಲ್ಯೂಮಿನಿಯಂ ಪಾತ್ರೆ ಹಾಗೂ ಅದರ ಒಳಭಾಗಕ್ಕೆ ಹೊಂದಿಕೊಂಡಿರುವ ಅಲ್ಯೂಮಿನಿಯಂ ತಟ್ಟೆ, 1 ಕಪ್ಪು ಬಣ್ಣದ ಪ್ಲಾಸ್ಟಿಕ್ ಪೈಪ್, 1 ಬಿಳಿ ಬಣ್ಣದ ಪ್ಲಾಸ್ಟಿಕ್ ಲಾಳಿಕೆ ಕಂಡು ಬಂದಿ ರುತ್ತದೆ, ನಂತರ ಶೋಧನಾ ಕಾರ್ಯವನ್ನು ಮುಂದುವರೆಸಿದಾಗ ಮನೆಯ ಬಲ ಭಾಗದ ಸೌದೆ ಕೊಟ್ಟಿಗೆಯಲ್ಲಿ 200 ಲೀ ಸಾಮರ್ಥ್ಯದ 1 ನೀಲಿ ಬಣ್ಣದ ಪ್ಲಾಸ್ಟಿಕ್ ಬ್ಯಾರೆಲ್‌ನಲ್ಲಿ ಅಂದಾಜು 180 ಲೀ ನಷ್ಟು ಬೆಲ್ಲದ ಪುಳಗಂಜಿ ಯಾವುದೇ ಪರ 01 ವಾನಗಿ ಇಲ್ಲದೇ ಮಾರಾಟ ಮಾಡುವ ಸಲುವಾಗಿ ಇಟ್ಟುಕೊಂಡಿರುವುದಾಗಿ

ಕಂಡುಬಂದಿದ್ದು, ಆ ಮೂಲಕ ಆರೋಪಿಯಾದ ನೀನು ಕರ್ನಾಟಕ ಅಬಕಾರಿ ಕಾಯಿದೆಯ ಕಲಂ 13(1)(ಎ)ದ 13(1)(ಎಫ್), 14(2), 32(1)(ಐ), 32(2)(ಇ), 34, 43(1) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ ಮತ್ತು ಸದರಿ ಆರೋಪಣೆಯ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ಪ್ರ-1: ಮೇಲಿನ ದೋಷಾರೋಪಣೆಯನ್ನು ಓದಿ, ತಿಳಿಸಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೆ?

ಉತ್ತರಃ

ಪ್ರ-2: ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಛಿಸುತ್ತೀರೋ?

ಉತ್ತರಃ

[ಈ ದೋಷಾರೋಪಣೆಯನ್ನು ಈ ದಿನ ದಿನಾಂಕ 21.04.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ]

ಸಹಿ/-

(ಕೆ.ಗೋಪಾಲಕೃಷ್ಣ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಸೋಮವಾರಪೇಟೆ.